**ದಿನಾಂಕಃ 24/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ಆರ್.ಎಸ್. ವಕೀಲರಿಂದಃ**

1. ನಾನು ಲಕ್ಷ್ಮಿಪುರ ಗ್ರಾ ಮದಲ್ಲಿ ವಾಸವಾಗಿದ್ದೇನೆ. ನಮ್ಮ ಊರಿಗೂ ಹಾಗೂ ವಾದಿಯವರ ಊರಿಗೆ ಸುಮಾರು 1 ಕಿ.ಮೀ ಅಂತರವಿದೆ. ಸ.ನಂ. 30 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಆದರೆ ವಾದಿ 1 ಎಕರೆ 35 ಗುಂಟೆಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಸ.ನಂ. 30 ರಲ್ಲಿ ಯಾರು ಯಾರು ಎಷ್ಟು ಎಷ್ಟು ಎಕರೆ ವಿಸ್ತೀರ್ಣವನ್ನು ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ಯಾವಾಗ ಪೋಡಿಯಾಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ಸ್ವತ್ತು ವಾದಿಗೆ ಯಾವಾಗ ಸಾಗುವಳಿಯಾಯಿತು ಎಂದು ನನಗೆ ಗೊತ್ತಿಲ್ಲ. ಈ ದಿನ ನನ್ನನ್ನು ರಾಮನಾಯಕರವರು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದರು. ನಾನು ಹಾಜರು ಪಡಿಸಿದ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ಯಾರು ನೀಡಿದರು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ರಲ್ಲಿ ವಾದಿಯವರು ಯಾವ ಇಸವಿಯಲ್ಲಿ ಮನೆಯನ್ನು ಕಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ಜಂಜರ್ ಸಂ. ಮತ್ತು ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ.

2. ಐಟಂ ನಂ.1 ರ ದಕ್ಷಿಣಕ್ಕೆ ರಾಮನಾಯಕ ರವರ ಜಮೀನು ಇದೆ. ಪಶ್ಚಿಮಕ್ಕೆ ಸಿದ್ದಲಿಂಗನಾಯಕ ರವರ ಜಮೀನು ಇದೆ, ಪೂರ್ವಕ್ಕೆ ಕೃಷ್ಣೇಗೌಡ ರವರ ತೋಟ ಮತ್ತು ಉತ್ತರಕ್ಕೆ ಸರ್ಕಾರಿ ಹಳ್ಳ ಇದೆ. ಐಟಂ ನಂ.1 ರ ಪಶ್ಚಿಮ ದಿಕ್ಕಿಗೆ ನಮ್ಮ ಜಮೀನು ಇದೆ ನಮ್ಮ ಜಮೀನಿನ ಸ.ನಂ. 38 ರಲ್ಲಿ 3 ಎಕರೆ ಜಮೀನು ಇದೆ. ವಾದಿಗಳ ಮೇಲೆ ಅಸಲು ದಾವಾ ಸಂ. 30/2015 ರನ್ನು ಪ್ರತಿವಾದಿಗಳು ಹೂಡಿದ್ದನ್ನು ನಾನು ತಿಳಿದುಕೊಂಡಿದ್ದೇನೆ ಸದರಿ ದಾವಾ ಏನಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯು ವಾದಿಗಳ ವಿರುದ್ಧ ಪ್ರತಿವಾದಿಗಳ ಪರವಾಗಿ ಪ್ರತಿವಾದಿಗಳಿಗೆ ತೊಂದರೆಯನ್ನು ನೀಡಬಾರದು ಎಂದು ತೀರ್ಪು ಆಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಯಾವ ಇಸವಿಯಲ್ಲಿ

ವಿಭಾಗವನ್ನು ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಸ.ನಂ. 30 ರಲ್ಲಿ ಯಾರು ಯಾರ ಯಾರಿಗೆ ಎಷ್ಟು ವಿಸ್ತೀರ್ಣದ ಸ್ವತ್ತು ವಿಭಾಗವಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ದಾವಾ ಸ್ವತ್ತಿನ ಕಂದಾಯ ಪಾವತೀಸಿದ ರಶೀದಿಗಳನ್ನು ನಾನು ನೋಡಿಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಗಳು ಎಂದು ತೊಂದರೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗಳೆ ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆಯನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ನಿಮಗೆ ಗೊತ್ತಿದ್ದರು ಸಹ ನೀವು ಪ್ರತಿವಾದಿಗಳಿಗೆ ತೊಂದರೆಯನ್ನು ನೀಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**